ನಮ್ಮ ಸೂಳ್ಯ ಭೂನ್ಯಾಯ ಮಂಡಲಿಯಲ್ಲಿ ಒಬ್ಬೊಬ್ಬ ಸದಸ್ಯರಿಗೆ ರೂ. ೧೩,೦೦೦ ಭತ್ಯೆ ದೊರೆಯಲಿಕ್ಕಿರುವುದು. ಸೂಳ್ಯ ಭೂನ್ಯಾಯ ಮಂಡಳಿಯಲ್ಲಿ ಅತ್ಯಾಚಾರದ ಪ್ರಕರಣದಲ್ಲಿ ಒಳಗೊಂಡ ಸದಸ್ಯರಿದ್ದು, ಈ ಸದಸ್ಯರು ಮುಂದುವರಿಯುವುದು, ಸರಿ ಅಲ್ಲ ಎಂದು ಸಾರ್ವಜನಿಕರು ಸರ್ಕಾರಕ್ಕೆ ಬರೆದುಕೊಂಡಿದ್ದರೂ ಈ ಬಗ್ಗೆ ಕ್ರಮ ಕೈಗೊಂಡಿರುವುದಿಲ್ಲ.

ಕಂದಾಯ ಇಲಾಖೆಯಲ್ಲಿ, ಗ್ರಾಮಲೆಕ್ಕಿಗರು, ತಹಶೀಲ್ದಾರರು ಅಸಿಸ್ಟೆಂಟ್ ಕಮಿಷನರು, ಮುಂತಾದವರನ್ನು ಸಾರ್ವಜನಿಕರು ಅವ್ಯವಹಾರದ, ದೂರು ನೀಡಿದಂತೆ, ಅವರನ್ನು ಒಮ್ಮೆ ವರ್ಗಾವಣೆ ಮಾಡಿ ಆದೇಶ ಜಾರಿಯಾಗಿ, ಬಿಡುಗಡೆ ಆದನಂತರ ಕೂಡಲೇ ಈ ವರ್ಗಾವಣೆಯನ್ನು ರದ್ದುಪಡಿಸಿ, ಸದರಿ ನೌಕರರು, ಅಧಿಕಾರಿಗಳು ಅದೇ ಸ್ಥಳದಲ್ಲಿ ಮುಂದುವರಿಯುವಂತೆ ಪುನಃ ಆದೇಶ ಹೊರಡಿಸಿದೆ.

ಇದು ಸದರಿ ನೌಕರರನ್ನು ವರ್ಗಾವಣೆಗೆ ಆಗ್ರಹಪಡಿಸಿದ ಸಾರ್ವಜನಿಕರಿಗೆ ತೀವ್ರ ಆಘಾತವನ್ನು ಉಂಟುಮಾಡಿದೆ. ಆದುದರಿಂದ ಈ ಮೇಲಿನ ವಿಷಯಂಗಳ ಬಗ್ಗೆ ಸೂಕ್ತ ಕ್ರಮವನ್ನು ಕೈಕೊಳ್ಳುವಂತೆ ಮಾನ್ಯ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಲ್ಯಾಂಡ್‌ಟ್ರಿಬ್ಯುನಲ್ ಅವ್ಯವಹಾರಗಳ ಬಗ್ಗೆ ಹೇಳಿದ್ದಾರೆ, ವರ್ಗಾವಣೆ ಬಗ್ಗೆ ಹೇಳಿದ್ದಾರೆ, ಅದರ ಬಗ್ಗೆ ವಿಚಾರಣೆ ಮಾಡಿ ಕೂಡಲೇ ಕ್ರಮ ಕೈಗೊಳ್ಳುತ್ತೇನೆ.

XI ಬಾಗೇಪಲ್ಲಿ ತಾಲ್ಲೂಕಿನಲ್ಲಿ ಎನ್. ಆರ್. ಇ.ಪಿ. ಯೋಜನೆಯ ಕೆಲಸ ನಿಂತಿರುವುದು

ಶ್ರೀ ಆರ್. ವೆಂಕಟರಾಮಯ್ಯ.—ಕೋಲಾರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಎನ್. ಆರ್. ಇ. ಪಿ. ಯೋಜನೆಯಲ್ಲಿ ಕೆಲಸ ನ್ಯಾಯವಾಗಿ ನಡೆಯುತ್ತಾ ಇಲ್ಲ. ಇತ್ತೀಚೆಗೆ ಮಿಟ್ಟಂಪಲ್ಲಿ (ಗೂಳೂರು ಹೋಬಳಿ) ಬಾಗೇಪಲ್ಲಿ ತಾಲ್ಲೂಕಿನಲ್ಲಿ ೧೯೮೫-೮೬ರಲ್ಲಿ ಕಟ್ಟುತ್ತಿರುವ ಶಾಲಾ ಕಟ್ಟಡವೊಂದು ಇನ್ನೂ ಪೂರ್ತಿಯಾಗುವ ಮೊದಲೇ ಬಿದ್ದುಹೋಗಿದೆ. ಈ ಕಟ್ಟಡಕ್ಕೆ ಈಗಾಗಲೇ ೧೬,೦೦೦-೦೦ ರೂಪಾಯಿಗಳು ಕೊಟ್ಟಿದ್ದು ಇನ್ನು ಕೇವಲ ಎರಡು ಸಾವಿರ ರೂಪಾಯಿಗಳು ಮಾತ್ರ ಬಾಕಿ ಇರುತ್ತದೆ. ಈ ಕೆಲಸವನ್ನು ತಾಲ್ಲೂಕು ಅಭಿವೃದ್ಧಿ ಮಂಡಳಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಚೇರಿಯಿಂದ ಮಾಡಿಸಿರುವುದು. ಇಲ್ಲಿ ಇಂತಹ ಅನೇಕ ಕಳಪೆ ಕೆಲಸಗಳು ನಡೆಯುತ್ತಿದ್ದರೂ ಈ ಬಗ್ಗೆ ಅನೇಕ ದೂರುಗಳಿದ್ದರೂ ಸರಕಾರ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಯಾವ ಕ್ರಮವನ್ನು ತೆಗೆದುಕೊಳ್ಳುತ್ತದೆ ? ಈ ಬಗ್ಗೆ ಸದನದ ಗಮನ ಸೆಳೆಯಲು ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳಿಗೆ ಈ ಮೂಲಕ ತಿಳಿಸಲೇಕೆಯನ್ನು ಕೇಳಬಯಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೆ. ಈ ವಿಚಾರವನ್ನು ಗ್ರಾಮೀಣ ಅಭಿವೃದ್ಧಿ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಅಲ್ಲದೆ, ನಾನು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಆದೇಶ ಕೊಡುತ್ತೇನೆ.

XII ರಾಣೇಬೆನ್ನೂರು ತಾಲ್ಲೂಕು ಹೊಸಪೇಟೆಯ ಹತ್ತಿರ ರೈತರು ಮಣ್ಣು ತೆಗೆದು ಕಂದಕ ಮಾಡಿರುವುದರಿಂದ ರೈಲ್ವೆ ಸೇತುವೆಗೆ ಜಖಂ ಆಗುವ ಪರಿಸ್ಥಿತಿ ಬಂದಿರುವುದು.

ಶ್ರೀ ಬಿ ಜಿ. ಕೊಟ್ರಪ್ಪ.—ಮಾನ್ಯ ಅಧ್ಯಕ್ಷರೇ. ಹರಿಹರ ಮತ್ತು ರಾಣೆಬೆನ್ನೂರು ತಾಲ್ಲೂಕು ಹೊಸಪೇಟೆ ಮಧ್ಯದಲ್ಲಿ ಒಂದು ದೊಡ್ಡ ರಸ್ತೆ ಸೇತುವೆ ಮತ್ತು ರೈಲು ಹಳಿರಸ್ತೆ ಇದ್ದು ಹೊಸಪೇಟೆಯ ಜಮೀನ್ದಾರರು ಜಮೀನಿನಿಂದ ಮಣ್ಣು ತೆಗೆದು ಇಟ್ಟಿಗೆ ಸುಡುತ್ತಿದ್ದು ಹೊಳೆಯಿಂದಲೇ ದೊಡ್ಡ ದೊಡ್ಡ ಕಂದಕ ಮಾಡಿದ್ದು ಈಗ ಒಂದು ತಿಂಗಳ ಹಿಂದೆ ದೊಡ್ಡ ಹೊಳೆ ಬಂದು ಆ ಕಂದಕದಲ್ಲಿ ನೀರು ತುಂಬಿಕೊಂಡಿದ್ದು ಸರ್ಕಾರದ ಗಮನಕ್ಕೆ ತಂದು ಇದೇರೀತಿ ಇಟ್ಟಿಗೆ ಸುಡಲು ಆಲ್ಲಿಯ ಜಮೀನ್ದಾರರು ಮಣ್ಣು ಬಳಸಿ ರೈತಾಪಿ ಜಮೀನನ್ನು ಉಪಯೋಗಿಸಿ ಕಂದಕ ಮಾಡಿದ್ದಲ್ಲಿ ರೈಲು ಸೇತುವೆ ಮತ್ತು ರಸ್ತೆ ಅಲ್ಲದೆ ರಾಷ್ಟ್ರೀಯ ಹೆದ್ದಾರಿ ಳರ ರಸ್ತೆ ಮತ್ತು ಸೇತುವೆ ಕೊಚ್ಚಿ ಹೋಗುವ ಪ್ರಸಂಗ ಬಂದಿದ್ದು ಅದನ್ನು ತಡೆಗಟ್ಟಲು ತೀಘ್ರಕ್ರಮ ತೆಗೆದು

ಕೊಳ್ಳಲು ಸರ್ಕಾರದ ಗಮನ ಸೆಳೆಯುತ್ತಿದ್ದೇನೆ. ಇದಕ್ಕೆ ರೆವಿನ್ಯೂ ಮಂತ್ರಿಗಳಿಂದ ವಿವರ ಬೇಕಾಗಿದೆ. ಆದ್ದರಿಂದ ಅವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ, ಭೂ ಒಡೆಯರು ಸರ್ಕಾರದ ಪರವಾನಗಿ ಇಲ್ಲದೆ ಈ ರೀತಿ ಮಾಡುವುದು ಸರಿಯಲ್ಲ ನಾನು ಇದರ ಬಗ್ಗೆ ಕೂಡಲೇ ಜಿಲ್ಲಾಧಿಕಾರಿಗಳಿಗೆ ತಿಳಿಸಿ, ಮಣ್ಣು ತೆಗೆಯುವುದನ್ನು ನಿಲ್ಲಿಸುವಂತೆ ತಿಳಿಸಿ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ತಿಳಿಸುತ್ತೇನೆ.

XIII ಬೆಂಗಳೂರಿನ ಪಾದರಾಯನಪುರದ ಪೋಲೀಸ್‌ಸ್ಟೇಷನ್ನಿನ ಹತ್ತಿರ ಇರುವ ಪ್ರಾಥಮಿಕ ಶಾಲೆಯಂ ಸುತ್ತ ಮುತ್ತ ಮಲ ವಿಸರ್ಜನೆ ಮಾಡುತ್ತಿರುವುದು.

ಶ್ರೀ ಜಿ. ಧರ್ಮಪ್ಪ.—ಮಾನ್ಯ ಅಧ್ಯಕ್ಷರೆ, ಬೆಂಗಳೂರಿನ ಪಾದರಾಯನಪುರ (ಜೆಗಜೀವನ ರಾಮ ನಗರ) ಪೋಲೀಸ್ ಸ್ಟೇಷನ್ ಹತ್ತಿರ ಮೊದಲನೆಯ ಕ್ರಾಸ್‌ನಲ್ಲಿ ಒಂದು ಸರ್ಕಾರೀ ಹಿರಿಯ ಪ್ರಾಥಮಿಕ ಶಾಲೆಯಿದ್ದು ೧೫೫ ಜನರು ಉಪಾಧ್ಯಾಯರಿರುತ್ತಾರೆ, ಶಾಲಾಕಟ್ಟಡದ ಸುತ್ತಲೂ ಖಾಲಿ ಜಾಗವಿದ್ದು ಆ ಖಾಲಿ ಜಾಗವೆಲ್ಲಾ ಮಲಮೂತ್ರದಿಂದ ತುಂಬಿ ಹೋಗಿರುತ್ತೆ. ಶಾಲೆಯ ಮುಂಭಾಗದ ವರಾಂಡದಲ್ಲಿ ಮತ್ತು ಮೆಟ್ಟಿಲು ಮೇಲೆಲ್ಲಾ ಬೆಳಕು ಹರಿಯುವ ಹೊತ್ತಿಗೆ ಮಲ ದಿಂದ ತುಂಬಿಹೋಗಿರುತ್ತದೆ ಮಕ್ಕಳು ಶಾಲೆಗೆ ಹೋಗಬೇಕಾದರೆ ಇದರ ಮೇಲೆಯೇ ಹೋಗಬೇಕು ಉಪಾಧ್ಯಾಯರು ಮತ್ತು ಮಕ್ಕಳು ಶಾಲೆಗೆ ಪ್ರವೇಶ ಮಾಡುವುದೇ ಒಂದು ದುಸ್ಸಾಹಸ. ನನಗೆ ಆಶ್ಚರ್ಯವೆಂದರೆ, ಬೆಂಗಳೂರು ನಗರದಲ್ಲಿ ಕಾರ್ಪೊರೇಷನ್ ಇದ್ದು, ದಿನಪೂಸಹಸ್ರಾರು ಜನರು ಈ ಸ್ಥಳವನ್ನು ನೋಡುತ್ತಿದ್ದು, ಅನೇಕ ಅಧಿಕಾರಿಗಳ ಗಮನ ಸೆಳೆದಿದ್ದರೂ ಏನು ಪ್ರಯೋಜನವಾಗಿಲ್ಲ ವೆಂದು ತಿಳಿದು ಬಂದಿದೆ. ಇದು ಶಾಲೆಯಲ್ಲ ಮಲಮೂತ್ರದ ಒಂದು ಗುಂಡಿಯಾಗಿದೆ. ಬೆಂಗಳೂರಿನಲ್ಲಿ ಈ ರೀತಿ ಶಾಲೆಯ ಪರಿಸ್ಥಿತಿ ಇದ್ದರೆ ಮಕ್ಕಳು ಹೇಗೆ ಕಲಿತಾರು ಎಂಬುದನ್ನು ಬೆಂಗಳೂರಿನ ಪ್ರಜ್ಞಾವಂತರು ಈ ಸ್ಥಳಕ್ಕೆ ಭೇಟಿ ನೀಡಿ ನಿರ್ಧಾರಕ್ಕೆ ಬರಬಹುದು. ಈಗಲಾದರೂ ಕೂಡಲೇ ಸರ್ಕಾರದವರು ಮತ್ತು ಕಾರ್ಪೋರೇಷನ್‌ನವರು ಸ್ಥಳಕ್ಕೆ ಭೇಟಿ ಕೊಟ್ಟು ಈ ಶಾಲೆಗೆ ಸದ್ಗತಿ ಕಾಣಿಸಲು ಏರ್ಪಾಡು ಮಾಡಬೇಕಾಗಿ ನಾನು ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ— ಮಾನ್ಯ ಅಧ್ಯಕ್ಷರೇ, ಇಂಥ ವಿಷಯಗಳೆಲ್ಲಾ ೩೫ರಲ್ಲಿ ಬಂದರೆ ದೇವರೇ ಕಾಪಾಡಬೇಕಂ. ಮಾನ್ಯ ಮಂತ್ರಿಗಳ ಗಮನಕ್ಕೆ ಈ ವಿಷಯವನ್ನು ತರುತ್ತೇನೆ.

XIV ತೋಟಗಾರಿಕೆ ಇಲಾಖೆಯ ಸಹಾಯಕ ತೋಟಗಾರಿಕೆ ಅಧಿಕಾರಿಗಳ ವರ್ಗವನ್ನು ರದ್ದು ಮಾಡಿರುವುದು

ಶ್ರೀ ಬಿ. ಆರ್. ನೀಲಕಂಠಪ್ಪ.— ಮಾನ್ಯ ಅಧ್ಯಕ್ಷರೇ, ತೋಟಗಾರಿಕೆ ಇಲಾಖೆಯಲ್ಲಿ ಸಹಾ ಯಕ ತೋಟಗಾರಿಕೆ ಅಧಿಕಾರಿಗಳನ್ನು ವರ್ಗ ಮಾಡಿ ಮತ್ತೆ ರದ್ದು ಮಾಡಿರುವ ಬಗ್ಗೆ ಸಂಬಂಧಪಟ್ಟ ಮಂತ್ರಿಗಳಿಂದ ವಿವರವನ್ನು ತಿಳಿಯಬಯಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ತೋಟಗಾರಿಕೆ ಇಲಾಖಾ ಮಂತ್ರಿಗಳ ಪರವಾಗಿ)

ಮಾನ್ಯ ಅಧ್ಯಕ್ಷರೆ, ತೋಟಗಾರಿಕೆ ಇಲಾಖೆಯಲ್ಲಿ ಒಟ್ಟು ೫೬೬ ಸಹಾಯಕ ತೋಟಗಾರಿಕೆ ಅಧಿಕಾರಿಗಳಿದ್ದಾರೆ. ಈ ಪೈಕಿ ೬೩ ಜನರನ್ನು ವರ್ಗ ಮಾಡಲಾಯಿತು. ಕೆಲವು ಅಧಿಕಾರಿಗಳಿಗೆ ಬಹಳ ತೊಂದರೆಯಾಗಿದೆಯೆಂದು ಮನವಿಗಳು ಬಂದಿದ್ದರಿಂದ ವಿಷಯ ಪರಿಶೀಲಿಸಲು ಸದರಿ ವರ್ಗಾವಣೆ ಆಜ್ಞೆಯನ್ನು ಸರ್ಕಾರ ಒಂದು ನಿರ್ಧಾರಕ್ಕೆ ಬರಬಹುದೆಂದು ೯-೭-೮೬ರಂದು ತಡೆಹಿಡಿಯಲಾಯಿತು. ಈ ಮಧ್ಯೆ ೨೫೫ ಜನ ಅಧಿಕಾರಿಗಳು ಕೆಲಸಕ್ಕೆ ಹಾಜರಾಗಿದ್ದು, ೧೨ ಅಧಿಕಾರಿಗಳು ಬಿಡುಗಡೆಯಾದರೂ ಹಾಜರಾಗದೆ ಇದ್ದು ೨೬ ಅಧಿಕಾರಿಗಳು ಇನ್ನೂ ಬಿಡುಗಡೆ ಆಗಿರುವುದಿಲ್ಲ. ಸರ್ಕಾರ ವಿಷಯವನ್ನು ಮತ್ತೆ ತೀವ್ರವಾಗಿ ಪರಿಶೀಲಿಸುತ್ತಿದೆ. ಇಲಾಖೆಯ ಕೆಲಸಕ್ಕೆ ಅನಾನುಕೂಲವಾಗದಂತೆ ಒಂದು ತೀರ್ಮಾನವನ್ನು ಶೀಘ್ರವಾಗಿ ತೆಗೆದುಕೊಳ್ಳಲಾಗುವುದು.